ಬೆಂಗಳೂರು ಸಿವಿಲ್ ವ ಮಿಲಿಟೇರಿ ಸ್ಪೇಷ್ಯಲ್ ಸಿವಿಲ್ ಜಡ್ಜಿಯವರ ಕೋರ್ಟ್‌ನಲ್ಲಿ.

1884ನೇ ಇಸವಿ ಸ್ಮಾಲ್‌ಕಾಜ್ ನಂಬರು 973.

1ನೇ ಎ. ಆರ್. ಸಭಾಪತಿ ಮೊದಲಿಯಾರ್ ರಾಯಬಹದ್ದೂರ್.
2ನೇ ವಿ. ಷಣ್ಮುಗ ಮೊದಲಿಯಾರ್ ಕೇವಲರಿ ರೋಡ್ ಕ್ರಾಸ್ ಲೈನು.
3ನೇ ಸಿ. ವರದರಾಜಪಿಳ್ಳೈ ಡಿಟೋ ಡಿಟೋ
4ನೇ ಯಂ. ಸುಬ್ಬರಾಯುಮೊದಲಿಯಾರ್ ತಿವಂಣಪೆಟ್ಟ ತೋಟದ ಬಳಿಯಿರುವದು.
5ನೇ ನಾರಾಯಣ ಪಿಳ್ಳೈಸ್ಟ್ರೀಟುನಲ್ಲಿಯರುವ ಯಿ. ವೆರಿಯಸ್ವಾಮಿಮೊದಲಿಯಾರ್
6ನೇ ವೀರಪಿಳ್ಳೈ ಸ್ಟ್ರೀಟಿನಲ್ಲಿಯಿರುವ ವಿ. ಯೇಗಾಂಬ್ರಮೊದಲಿಯಾರು
7ನೇ ಜ್ಯಾಯಲರ್ ಸ್ಟ್ರೀಟಿನಲ್ಲಿಯಿರುವ ಯಿ. ತಿರುವೆಂಗಡಸ್ವಾಮಿ ಮೊದಲಿಯಾರ್
8ನೇ ಕಮರ್ಸಿಯಲ್ ಸ್ಟ್ರೀಟಿನಲ್ಲಿಯಿರುವ ಯಿ. ವೆರುಮೂಳು ಮೊದಲಿಯಾರ್
9ನೇ ಸಪ್ಪಿಂಗ್ಸ್ ರೋಡಿನಲ್ಲಿಯಿರುವ ಟಿ. ನಾರಾಯಣಸ್ವಾಮಿಪಿಳ್ಳೈ.

10ನೇ ನಾರಾಯಣಪಿಳ್ಳೈ ಸ್ಟ್ರೀಟಿನಲ್ಲಿಯಿರುವ ಯಿ. ಪಾರ್ಥಸಾರತಿನೊದಲಿಯಾರ್ ಯಿವರೆಲ್ಲರು ಸಿವಿಲ್ ವ ಮಿಲಿಟೇರಿ ಸ್ಪೇಷ್ಯಲ್‌ನಲ್ಲಿಯಿರ ತಕ್ಕವರು ವಾದಿಗಳು.

ಸಿವಿಲ್ ವ ಮಿಲಿಟೇರಿ ಸ್ಪೇಷ್ಯಲ್ ಮಿನಾಕ್ಷಿಯಮನ ದೇವಸ್ಥಾನದ ಬಳಿಯಿರುವ ಸಣಿಪ ರಾಮುಸ್ವಾಮಿಪಿಟ್ಟ. ಪ್ರತಿವಾದಿ.

ಬೆಂಗಳೂರು ಸಿವಿಲ್ ಮತ್ತು ಮಿಲಿಟೇರಿ ಸ್ಪೇಷ್ಯಲ್‌ನಲ್ಲಿಯಿರುವ ಮಿನಾಕ್ಷಿಯಮನ ದೇವಸ್ಥಾನಕ್ಕೆ ಕೇರಿದ ಅಂಗಡಿಯ ಬಾಬತು ಬಾಡಿಗೆ ಬಾಕಿ ರೊಬಲಗು 49—12—0 ಪ್ರತಿವಾದಿಯಿಂದ ಬರಬೇಕೆಂತಲು ತಾವು ಡಿಟೋ ದೇವಸ್ಥಾನದ ಮ್ಯಾನೇಜರುಗಳೆಂದು ವಾದಿಗಳ್ ತಂದುಯಿರುವ ದಾವೆಯನ್ನು ಆಬೈರು ವಿಚಾರಣೆ ಬಗ್ಗೆ 1885ನೇ ಇಸವಿ ಜೂ 9ನೇ ಮಂಗಳವಾರ ನಿಷ್ಕರ್ಷೆಮಾಡಿ ಇರುತ್ತೆಯಾಗಿ ಈ ರೊಬ್ಬದ್ದೆಮೆದು ಪರ್ಯವಸಾನದಲ್ಲಿ ಸಂಬ್ರಂಧಪಟ್ಟ ವಿಷ್ಣುಜನಗಳೂ ಮೇಲೆ ನಮೂದಾಗುವ ತಾರೀಖು ದಿವಿ 11 ಘಂಟಿಗೆ ಈ ಕೋರ್ಟು ರೂಬರೂ ಹಾಜರಾಗಬೇಕಂದನ್ನೂ ಆಗ್ಯೆ ಅಂಘಾವತ ತಕರಾರುಗಳೆನಾದರು ಯಿದ್ದರೆ ವಿಚಾರಿಸಲ್ಪಡುತ್ತೆಂದನ್ನೂ ಇದರಿಂದ ಪ್ರಸಿದ್ಧ ಪಡಿಸು ಯಿರುತ್ತೆ.

1885ನೇ ಇಸವಿ ಮೇ ತಾರೀಖು 7ರಲ್ಲಿ ನಮ್ಮ ಸೈ ಮತ್ತು ಕೋರ್ಟು ಮೊಹರಿನಿಂ ಕೊಡಲ್ಪಟ್ಟು ಯಿರುತ್ತೆ.

ಯಿ. ಟಿ. ಮ್ಯಾಲ್ಟಬಿ,
ಜಡ್ಜ್.

ಗವರ್ನಮೆಂಟ್ ತರಯೀರ್ ಬಾಬತು ಸಿಂಕೋನಾ ಫೆಬ್ರಿಫ್ಯೂಜ್ ಎಂಬ ಔಷಧ.

ಈ ಔಷಧವು, ಕ್ವಿನೈನ್‌ಗೆ ಬದಲಾಗಿ ಉಪಯೋಗಿಸತಕ್ಕ ಬಹಳ ಯೋಗ್ಯವಾದ ಔಷಧವಾಗಿರುತ್ತೆ. ಜನಗಳಿಗಾಗಿ ವ ಧರ್ಮಾರ್ಥವಾಗಿ ಗವರ್ನಮೆಂಟ್ ಆಫೀಸರ್‌ಗಳು ಕೊಂಡು ಕೊಳ್ಳಬಹುದು, ಬಂದು ಸಲಕ್ಕೆ ಇಪ್ಪತ್ತು ಪೌಗಳು ತೆಗದುಕೊಳ್ಳುವ ಯಾವ ಮನುಷ್ಯನಾದರೂ ಕಲ್ಕತ್ತೆಯಲ್ಲಿ ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರ ಬೆಕೆಯಿಂದ ಇದರಡಿ ಕಂಡ ದರಗಳ ಪ್ರಕಾರ ನಗದು ಕೊಟ್ಟೇ ಕೊಂಡು ಕೊಳ್ಳಬೇಕಾಗಿರುತ್ತೆ. ನಾಲ್ಕು ಡ್ರಾಸ್ ಔಷಧವುಳ್ಳ ತಗರದ ಡಬ್ಬೀ ಬಂದಕ್ಕೆ ರೂ. 4—8—0; ಎಂಟು ಡ್ರಾಸ್‌ವುಳ್ಳ ಡಬ್ಬಿಗೆ ರೂ. 8—8—0; ಬಂದು ಪೌ ಔಷಧವುಳ್ಳ ಡಬ್ಬಿಗೆ ರೂ. 16—8—0; ಬೊಟಾನಿಕಲ್ ಗಾರ್ಡನ್ ಸೂಪರ್‌ಟೆಂಡೆಂಟರು ಇದರಡಿ ಕಂಡ ದರ ಪ್ರಕಾರ ನಗದಿಗೇನೇ ಸರ್ವಜನಗಳಿಗೂ ಒದಗಿಸ ಬಹುದು; ನಾಲ್ಕು ಡ್ರಾಸ್‌ವುಳ್ಳ ಡಬ್ಬಿಬಂದಕ್ಕೆ ರೂ. 5—8—0, ಎಂಟು ಡ್ರಾಸ್‌ವುಳ್ಳ ಡಬ್ಬಿಗೆ ರೂ. 10—8—0, ಬಂದು ಪೌವುಳ್ಳ ಡಬ್ಬಿಗೆ 20 ರೂಪಾಯಿ. ಈ ಔಷಧವು, ಕಲ್ಕತ್ತೆಯಲ್ಲಿ ಮುಖ್ಯ ಮುಖ್ಯ ಯೂರೋಪಿಯರ್ ಸೇಟಿವ ಮದ್ದಿನಂಗಡಿಯವರಿಂದ ಮಾರಲ್ಪಡುತ್ತೆ. ಸದರೀ ಕಿಮ್ಮತಿನೊಂದಿಗೆ ದರ 4 ವ 8 ಡ್ರಾಸ್ ತಗರದ ಡಬ್ಬೀಗೆ ಎಂಟು ಆಣೆ ಟಪ್ಪಾಲ್ ಹಾಸಲೂ, ಬಂದು ಪೌ ಡಬ್ಬಿಗೆ ಹನ್ನೆರಡು ಆಣೆ ಹಾಸಲೂ ಕೊಡಬೇಕು.